


# ಗಿರಡ್ಡಿ ಗೋವಿಂದರಾಜ

ನವ್ಯ ವಿಮರ್ಶಕರಾಗಿ ಗುರುತಿಸಲಾಗುವ ಗಿರಡ್ಡಿ ಗೋವಿಂದರಾಜರು ಕತೆ, ಕವಿತೆ, ಭಾಷಾಶಾಸ್ತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಗದಗ ಜಿಲ್ಲೆ ರೋಣ ತಾಲ್ಲೂಕಿನ ಅಬ್ಬಿಗೇರಿಯವರಾದ ಗೋವಿಂದರಾಜರ ಆರಂಭಿಕ ವಿದ್ಯಾಭ್ಯಾಸ ಅಬ್ಬಿಗೇರಿ, ನರೇಗಲ್ಲ, ರೋಣಗಳಲ್ಲಿ ಆಯಿತು.

ಇಂಗ್ಲಿಷ್‌ನಲ್ಲಿ ಎಂ.ಎ. ಪದವಿ ಪಡೆದ ಅವರು ಬಳಿಕ ಇಂಗ್ಲಂಡಿನಲ್ಲಿ ಭಾಷಾಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದಿದ್ದಾರೆ. ಇಂಗ್ಲಿಷ್ ಅಧ್ಯಾಪಕರಾಗಿ ಧಾರವಾಡದ ಕರ್ನಾಟಕ ಕಾಲೇಜು, ಗುಲ್ಬರ್ಗಾ ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದಾರೆ. ಪ್ರಸ್ತುತ ಧಾರವಾಡದಲ್ಲಿ ನೆಲೆಸಿದ್ದಾರೆ.

ಗಿರಡ್ಡಿ ಅವರ ಕೃತಿಗಳು: 'ಶಾರದಾಲಹರಿ', 'ರಸವಂತಿ', 'ಮರ್ಲಿನ್ ಮನ್ರೊ' ಕವನ ಸಂಗ್ರಹಗಳಾದರೆ, 'ಆ ಮುಖಾ – ಈ ಮುಖಾ', 'ಹಂಗು ಮತ್ತು ಇತರ ಕತೆಗಳು', 'ಒಂದು ಬೇವಿನ ಮರದ ಕತೆ' ಅವರ ಕಥಾಸಂಗ್ರಹಗಳಾಗಿವೆ. 'ಸಣ್ಣ ಕಥೆಯ ಹೊಸ ಒಲವುಗಳು', 'ಜನಪದ ಕಾವ್ಯ', 'ನವ್ಯ ವಿಮರ್ಶೆ', 'ಕಾದಂಬರಿ: ವಸ್ತು ಮತ್ತು ತಂತ್ರ', 'ಸಾಹಿತ್ಯ ಮತ್ತು ಪರಂಪರೆ', 'ಇಂಗ್ಲಂಡಿನ ರಂಗಭೂಮಿ', 'ನಾಟಕ ಸಾಹಿತ್ಯ ಮತ್ತು ರಂಗಭೂಮಿ', 'ಸಾತತ್ಯ', 'ವಚನ ವಿನ್ಯಾಸ' ಅವರ ಇನ್ನಿತರ ಪುಸ್ತಕಗಳಾಗಿವೆ. 'ಹಿಡಿಯದ ಹಾದಿ' ಅವರ ಲಲಿತ ಪ್ರಬಂಧಗಳ ಪುಸ್ತಕ. ಗಿರಡ್ಡಿ ಹಲವು ಪುಸ್ತಕಗಳನ್ನು ಸಂಪಾದಿಸಿದ್ದಾರೆ. ಅವರ 'ಹಂಗು' ಕತೆ ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಕಥಾಸಂಗಮ' ಸಿನಿಮಾದ ಮೂರುಕತೆಗಳಲ್ಲಿ ಒಂದು.

'ಸಂಕ್ರಮಣ' ಸಾಹಿತ್ಯ ಪತ್ರಿಕೆಯ ಸ್ಥಾಪಕ ಸಂಪಾದಕರಲ್ಲಿ ಗಿರಡ್ಡಿಯವರೂ ಒಬ್ಬರಾಗಿದ್ದರು. ಅವರ ಇತ್ತೀಚಿನ ಅನುವಾದಿತ ಪುಸ್ತಕ 'ಜಯ'.

ನನ್ನ ಲಕ್ಷ್ಯ ಎಲ್ಲಾ ಇಕಿನ್ನ ರಸ್ತೇ ದಾಟಿಸೊದರೊಳಗs ಇತ್ತು... ಹಿಂಗಾಗಿ ನನಗ ಕೇಳಿಸಲಿಲ್ಲ' ಎಂದೆ.

'ಮತ್ತೇನ್ರಿ ಸರ್, ಎಷ್ಟು ದಿವಸದ ಮ್ಯಾಲ ನಿಮ್ಮ ಭೆಟ್ಟೀ ಆದಂಗಾಯ್ತು. ಇವತ್ತ ಅನಾಯಾಸ ದೇವರು ಸಿಕ್ಕಂಗ ಸಿಕ್ಕಿರಿ. ಅಲ್ಲರೀ ಸರ್, ಅಷ್ಟು ಪತ್ರಾ ಬರದರೂ ಒಂದೂ ಉತ್ತರಾ ಬರೀಲಿಲ್ಲ ನೀವು. ನನ್ನ ಮರತsಬಿಟ್ಟಿರೋ ಏನು?'

'ಹಂಗೇನಿಲ್ಲಪಾ. ನಾನು ಪತ್ರ ಬರೀಯೂದರೊಳಗ ಸ್ವಲ್ಪ ಆಲಸೀ ಮನುಷ್ಯ. ನಿನಗ ಗೊತ್ತಿದ್ದದ್ದs ಐತಲ್ಲ!'